ಪುರುಷರು ಹೆಚ್ಚಾಗಿ ಕಾಣಿಸಿಕೊಳ್ಳುವುದಿಲ್ಲ. ಪಾರ್ಕ್‌ಗಳಲ್ಲಿ, ವೆಬ್‌ಸೈಟ್‌ಗಳಲ್ಲಿ ಇವರನ್ನು ಪತ್ತೆ ಹಚ್ಚುತ್ತಾರೆ. ಪುರುಷರನ್ನು 'ವ್ಯಭಿಚಾರಿ' ಎಂದು ಕರೆಯುವುದಿಲ್ಲ. ಮಹಿಳೆಯರಿಗೆ ಮಾತ್ರ ಇದು ಸೀಮಿತ. ಸಮಾನತೆಯ ಸಲುವಾಗಿ, ಪ್ರತಿ ವರ್ಷ ಆಗಸ್ಟ್ 3ರಂದು ಪುರುಷರು ಮಾಡೆಲ್‌ಗಳಂತೆ ನಿಂತು ಇಡೀ ದಿನ ತಮ್ಮನ್ನೇ ಪ್ರದರ್ಶಿಸಿಕೊಂಡು ಆಮ್‌ಸ್ಟರ್‌ಡ್ಯಾಂ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ.

ಸರ್ಕಾರವೇ ಮುಕ್ತವಾಗಿ ಸುಮಾರು 150ಕ್ಕೂ ಹೆಚ್ಚು 'ಕ್ಯಾನಬಿಸ್ ಕಾಫಿಶಾಪ್'ಗಳಲ್ಲಿ ಕ್ಯಾನಬಿಸ್ ಮತ್ತು ಇತರೆ ಮಾದಕ ವಸ್ತುಗಳನ್ನು ಮಾರಲು ಲೈಸೆನ್ಸ್ ಕೊಟ್ಟಿದೆ. ತಂಪು ಪಾನೀಯ, ಸಣ್ಣ ತಿಂಡಿ ತಿನಿಸು, ಊಟಗಳಲ್ಲಿ ಮಾದಕ ವಸ್ತುಗಳನ್ನು ಸೇರಿಸಿ ಮಾರಲು ಲೈಸೆನ್ಸ್ ಸಿಗುತ್ತದೆ. ಆಶ್ಚರ್ಯವೆಂದರೆ, ತಂಬಾಕು ಮಾರಾಟಕ್ಕೆ ಪರ್ಮಿಟ್ ಇಲ್ಲ! ಮತ್ತು ಕಾಫಿ ಅಂಗಡಿಗಳಲ್ಲಿ ಮದ್ಯದ ವ್ಯಾಪಾರ ಮಾಡುವಂತಿಲ್ಲ. ಸರ್ಕಾರ ಈ ಲೈಸೆನ್ಸ್ ಕೊಡುವ ಮೊದಲು ಕ್ಯಾನಬಿಸ್ ಅನ್ನು ಮುಕ್ತವಾಗಿ 1970ರಲ್ಲಿ ಮಾರಾಟ ಮಾಡಲು ತೊಡಗಿದರು. ಪೊಲೀಸ್ ಹಾಗೂ ಪೌರಾಡಳಿತದಿಂದ ವಿರೋಧ ಉಂಟಾಗಿ ಆಗಾಗ ಮುಚ್ಚಲ್ಪಡುತ್ತಿದ್ದವು. 1976ರಲ್ಲಿ ನೆದರ್ಲೆಂಡ್ಸ್ ಸರ್ಕಾರ 30 ಗ್ರಾಂ (ಒಂದು ಔನ್ಸ್)ನಷ್ಟು ಮಾದಕ ವಸ್ತು ಅಪರಾಧವಲ್ಲ ಎಂಬ ಹೊಂದಾಣಿಕೆಗೆ ಬಂದಿತು. ಹಾಗಾಗಿ ಈ ಲೈಸೆನ್ಸ್ ಹೊಂದಿದ ಕಾಫಿ ಶಾಪ್‌ಗಳು ಹುಟ್ಟಿಕೊಂಡವು.



ಮಾದಕ ವಸ್ತುಗಳ ಮಾರಾಟದೊಂದಿಗೆ ಮಹಿಳಾ ಕಳ್ಳಸಾಗಣೆ, ವಿನಾಶಕಾರಿ ಡ್ರಗ್ ವಹಿವಾಟು ಎಲ್ಲವೂ ಆರಂಭವಾದಾಗ ಮಿಕ್ಕ ಯೂರೋಪಿಯನ್ ಯೂನಿಯನ್ ರಾಷ್ಟ್ರಗಳು ಇದನ್ನು ಸುತರಾಂ ಒಪ್ಪಲಿಲ್ಲ. ವಿಶ್ವಸಂಸ್ಥೆಯ **(united nation drugs and crime wing)** ಡ್ರಗ್ಸ್ ಅಂಡ್ ಕ್ರೈಮ್ಸ್ ಸಂಸ್ಥೆ, ಇಲ್ಲಿಯ ಮಹಿಳಾ ಸಾಗಣಿಕೆಯ ವಿರುದ್ಧ ಅಡ್ಡಗಾಲು ಹಾಕಿತು. ಈ ದಂಧೆಗಾಗಿ ಹೆಣ್ಣುಗಳು ಪೂರ್ವ ಯೂರೋಪ್, ಆಫ್ರಿಕಾ, ಏಷ್ಯಾ ಖಂಡಗಳಿಂದ ಬರತೊಡಗಿದರು.

ಸ್ವಲ್ಪ ಹಿಂದಕ್ಕೆ ಹೋದರೆ, 1811ರಲ್ಲಿ ನೆಪೋಲಿಯನ್ ಕಾಲದಲ್ಲಿ, ವೇಶ್ಯಾವಾಟಿಕೆ ಮೇಲೆ ಹಾಕಿದ್ದ ತಡೆಯಾಜ್ಞೆಯನ್ನು ತೆರವು ಮಾಡಲಾಯಿತು. 'ಡಿ ವಾಲ್ಲೆನ್'ನಲ್ಲಿ, ಫ್ರೆಂಚ್ ಯೋಧರೇ ಈ ಹೆಣ್ಣುಗಳಿಗೆ ಪ್ರಮುಖ ಗ್ರಾಹಕರು. ಅವರ ಆರೋಗ್ಯ ತಪಾಸಣೆ ನಡೆಸುವ ಹೊಣೆಯನ್ನು ಸರ್ಕಾರ ಹೊತ್ತಿತ್ತು. ಈ ಕೆಲಸದಲ್ಲಿ ತೊಡಗಿಸಿಕೊಳ್ಳಲು, ಸರ್ಕಾರ ಕೆಂಪು ಕಾರ್ಡ್ ಕೊಡುತ್ತಿತ್ತು. ಗುಹ್ಯ ರೋಗಕ್ಕೆ ಒಳಗಾಗಿದ್ದರೆ ಅದು ಗುಣವಾಗುವ ತನಕ ಕೆಂಪು ಕಾರ್ಡ್ ಹಿಂಪಡೆಯುತ್ತಿದ್ದರು. ಈ ರೋಗಗಳಿಗೆ ಸರಿಯಾದ ಔಷಧ ಇರುತ್ತಿರಲಿಲ್ಲ. ಪಾದರಸದ ಸ್ನಾನ ಮಾಡುವುದೊಂದೇ ಪರಿಹಾರವಾಗಿತ್ತು.


ನಾಲೆಯೇ ಪ್ರವಾಸೋದ್ಯಮಕ್ಕೆ ಜೀವಾಳ

20ನೇ ಶತಮಾನದಲ್ಲಿ ಧಾರ್ಮಿಕ ಸಂಸ್ಥೆಗಳು ವೇಶ್ಯಾವಾಟಿಕೆಯನ್ನು ನಿರ್ಮೂಲನೆ ಮಾಡಬೇಕೆಂದು ಹರಸಾಹಸ ಮಾಡಿದವು. 1911ರಲ್ಲಿ ವೇಶ್ಯಾವಾಟಿಕೆ ನಡೆಯುವ ಮನೆಗಳನ್ನು ನಿಷೇಧಿಸುವ ಕಾನೂನನ್ನು ಜಾರಿಗೆ ತರಲಾಯಿತು. ಹಾಗೆಂದ ಮಾತ್ರಕ್ಕೆ ಆ ವೃತ್ತಿ ನಿಂತುಹೋಗಲಿಲ್ಲ, ಭೂಗತವಾಯಿತಷ್ಟೆ. ಕೆಲಸ ಕಳಕೊಂಡ ಹೆಣ್ಣುಗಳು, 'ಡಿ ವಾಲ್ಲೆನ್'ನಿಂದ 'ಡಿ ಫಿಜ್ಪ್'ನತ್ತ ಸಾಗಿದರು. 1935ರಲ್ಲಿ, ಸುಮಾರು 150ರಷ್ಟು ಮುಖವಾಡ ತೊಟ್ಟ ಪಾರ್ಲರ್‌ಗಳು ಹುಟ್ಟಿಕೊಂಡವು. ಮಸಾಜ್, ಇನ್ನಿತರ ಸೌಂದರ್ಯ ಶುಶ್ರೂಷೆಗಳ ಅಂಗಡಿಗಳಾಗಿ ಮುಂದೆ ಕಂಡರೂ, ತೆರೆ ಹಿಂದೆ ವೇಶ್ಯಾವಾಟಿಕೆ ನಡೆಯುತ್ತಿತ್ತು. ಪರದೆ ಹಿಂದೆ, ಸೀಳು ಗೋಡೆಯಲ್ಲಿ ಇಣುಕಿ ದಾರಿಹೋಕರನ್ನು ಬರಮಾಡಿಕೊಳ್ಳಬೇಕಿತ್ತು. ಬಾಗಿಲಲ್ಲಿ ನಿಂತರೆ ಬಂಧನಕ್ಕೆ ಒಳಗಾಗುತ್ತಿದ್ದರು.

ಸುಮಾರು 1.6 ಎಕರೆಯಲ್ಲಿ 20 ರಸ್ತೆಗಳಲ್ಲಿ ಈ ವಹಿವಾಟು ನಡೆಯುತ್ತಲೇ ಇದೆ. 20 ಸಾವಿರ ಹೆಣ್ಣುಗಳು ಈ ವೃತ್ತಿಯನ್ನು ನಡೆಸುತ್ತಿದ್ದಾರೆ ಎಂದು ಮಾಹಿತಿ ಹೇಳುತ್ತದೆ. ಈ ಕಸುಬುದಾರರಿಗೆ, ನೆದರ್ಲೆಂಡ್ಸ್ ಸರ್ಕಾರ ಕಾನೂನು ರೀತ್ಯ ರಕ್ಷಣೆ ಕೊಟ್ಟಿದೆ. ಆದರೆ 'ವರ್ಕ್ ಪರ್ಮಿಟ್ — ಗ್ರೀನ್ ಕಾರ್ಡ್' ಕೊಡುವುದಿಲ್ಲ. ಹಾಗಾಗಿ ಈ ಕಸುಬನ್ನು ಮುಂದುವರಿಸಿಕೊಂಡು ಹೋಗುವುದು, ಯೂರೋಪಿಯನ್ ಯೂನಿಯನ್ ಪ್ರಜೆಗಳು ಹಾಗೂ ಪರ್ಮನೆಂಟ್ ರೆಸಿಡೆಂಟ್‌ಶಿಪ್ ಇರುವ ವಿದೇಶಿಯರು ಮಾತ್ರ.

ಇದನ್ನು ನಡೆಸುವ ಕೊಠಡಿಗಳಿಗೆ 'ಸರ್ವ್ ಸೇಫ್' ಆರೋಗ್ಯ ಪತ್ರವಷ್ಟೇ ಮುಖ್ಯ. ಬೇರೆ ಯಾವ ನಿರ್ಬಂಧಗಳೂ ಇಲ್ಲ. ವಿಶ್ವದಾದ್ಯಂತ ಈ ಖುಲ್ಲಂಖುಲ್ಲಾ ಸೌಲಭ್ಯಕ್ಕೆ ಖಂಡನೆ ಹಾಗೂ ಧಿಕ್ಕಾರ ತೋರಿರುವುದರಿಂದ, 'ವೇಶ್ಯಾವಾಟಿಕೆ ಮಾಹಿತಿ ಕೇಂದ್ರ'ದ ಮುಖ್ಯಸ್ಥೆ ಮಾರ್ಸಿಕ ಮಜೂರ್, 2006 ಮತ್ತು 2007ರಲ್ಲಿ ಸಾರ್ವಜನಿಕ ದರ್ಶನಕ್ಕಾಗಿ 'ಶೋ'ಗಳನ್ನು ಏರ್ಪಡಿಸಿದ್ದರು. ಜನ ಬಂದು ನೋಡಿ ಇದನ್ನೂ ಒಂದು ಕಸುಬೆಂದು ಪರಿಗಣಿಸಲು ಶ್ರಮಪಟ್ಟರು. 2005ರಲ್ಲಿ, ಆಮ್‌ಸ್ಟರ್‌ಡ್ಯಾಂ ಚೌಕದ ನಡುಮಧ್ಯೆ 'ವಿಶ್ವದ ಎಲ್ಲಾ ವೇಶ್ಯೆಯರನ್ನು ಗೌರವಿಸಬೇಕು' ಎಂಬ ಸಂದೇಶವನ್ನು ಪ್ರತಿಪಾದಿಸಲು 'ಬೆಲ್ಲೇ' ಎನ್ನುವ ಕಂಚಿನ ಪ್ರತಿಮೆ ಪ್ರತಿಷ್ಠಾಪಿಸಿದರು. ಬಾಗಿಲಲಿ ನಿಂತು ದಾರಿ ಕಾಯುವ ಬೆಲೆವೆಣ್ಣಿನ ಸಂಕೇತವಿದು.

ದಲ್ಲಾಳಿಗಳು ಇರುವ ಈ ನಗರದಲ್ಲಿ 4000 ಅಲ್ಲದಿದ್ದರೂ ಕಡೇ ಪಕ್ಷ 400 ಹೆಣ್ಣುಗಳನ್ನು ಈ ಕಸುಬಿಗೆ ಬಲವಂತಕ್ಕೆ ತಳ್ಳಿರುವ ವಿಷಯ ಜಗಜ್ಜನಿತ; ಎಲ್ಲಾ 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂಬ ವಿಶ್ವವಾಸ್ತವ ನಾಣ್ಣುಡಿ ನೆನಪಾಗಿ ನಿಟ್ಟುಸಿರು ಸಿಕ್ಕಿಹಾಕಿಕೊಂಡಿತು.

ಪ್ರತಿಕ್ರಿಯಿಸಿ: **feedback@sudha.co.in**